Online Newspaper Clipping Service
**Dtd- Thursday, 22nd, March- 2018**

DECCAN HERALD

**Page No. 02**

# Humanity is above all, doctors told

**KOLAR: Humanity is above all than minting money in the medical profession. In the race to mint earn more bucks most of the doctors forget their duty and commitment towards the patients and their profession, said Dr H Sudarshan Ballal, chairman of the Manipal Health Enterprises Private Limited, from Bengaluru.**




MBBS graduate N Monica receives gold medals during the eighth convocation of Sri Devaraja Aras Medical College in Kolar on Wednesday. DH PHOTO

He was speaking at the 8th Convocation of Sri Devaraj Urs Medical College in the city on Wednesday.

Dr Ballal said doctors can earn all the respect and honour only if they are committed in their field. If they discharge their services dedicatedly, selflessly and honsetly, only then can they rise up in their profession.

Unfortunately, in recent days, medical science has become a field for minting money in our country. Doctors no longer are service-oriented and there is an erosion of values among them. It is a great misfortune to note that those doctors who have received their medical education in our country, practice in foreign countries to earn those extra bucks, he expressed.

He further explained that the relation between the patient and the doctor is of paramount importance. Just through kind words and confidence, the doctors can cure the patients 100 per cent. Apart from medical education, there is a need for the doctors to also professionally gear up and hone up their skills of the trade to survive in their profession. Mere degrees in medical science will not help become become a doctor. There are also other aspects which should be taken into consideration which help in moulding the doctors completely, Dr Ballal advised.

## Organ transplantation

Speaking about organ transplantation, Dr Ballal spoke in detail about the kidney transplantation. He said that most of the kidney ailments which are serious in nature, require kidney tranplantation. A few scandals that previously rocked the kidney transplantation cases lead to confusion with regards to kidney donation as well as kidney transplantation.

In the absence of effecient rules and guidances governing the subject, the matter had snowballed into a big controversy. However, this was not the situation at present. At least 95 per cent of kidney transplantation cases are successfull. Of late, not just kidney, most of the organ transplantation surgeries were performed successfully, Dr Ballal explained.

When compared to United States of America and other foreign countries, India is facing only 10 per cent of problems with regards to organ transplant. Most of the patients from economically poorer background are benefitted through the organ transplant which is implemented at a very affordable price in our country. At the same time, the doctors should also strive to create awareness on the various aspects organ transplantation among the public, he informed.

At least 80 per cent of the medical field in our country is privatised. Hence, the poor patients are forced to depend on the private hospitals for their treatment. Since there is a lot of progress in the field of medical technology, improved equipment should be used to perform surgeries, he advised.

## Face challenges

Every profession is bereft with problems and those from the profession should face them with grit and determination. Only then can they leave a mark and achieve something with contentment and strive for the best, Dr Ballal suggested.

There are as many as 580 medical colleges in our country. Every year, a total of 60,000 students pass out after completing various courses in the field of medical science. Among them, at least 30,000 students complete their postgraduation in the field, while the remaining students restrict themselves to the MBBS course, he explained.

Chancellor of the College Dr C V Raghuveer read out the annual report. MBBS and postgraduation students were conferred with degrees. Gold medals were presented to Dr C Soumya, Dr Pooja, Dr K M Abhishek, Dr Priyanka and Dr Kavya.

Vice-Chancellor of the College Dr S Kumar, vice-president Dr Rajesh N Jagadale, Registrar Dr A V M Kutti, Principal Dr Harendra Kumar, examination controlling officer Dr D V L N Prasad were present on the occasion.

**DH News Service**

# Autonomy of varsities to depend on accreditation scores

Prakash Kumar

NEW DELHI, DHNS: The grant of financial and academic autonomy, with respect to the regulatory controls of the UGC, awarded to the top 52 universities would depend on the maintenance of quality and standards with high accreditation scores and grades.

The University Grants Commission (UGC) had accorded greater autonomy to these 52 universities on Tuesday under two different categories, allowing them to take most of their academic and financial decisions on their own and letting them implement the decisions to achieve excellence without prior approval of the UGC.

"If a university fails to maintain status in a category and moves down to a lower category, it shall not be entitled to enjoy any privileges already accorded to it from the day of such downgrading," the UGC regulations for grant of graded autonomy said. A university, which has been accredited by the National Assessment and Accreditation Council (NAAC) with a score of 3.51 and above or has figured among the top 500 world universities in an international rating, is entitled for grant of greater autonomy in their functioning under category-I institutions.

The universities, which have been accredited by the NAAC with a score of 3.26 and above, upto 3.50, will be granted greater autonomy under category-II of the institutions. Rest of the universities will automatically be placed under category-III institutions and face the UGC's control and "close monitoring" till they improve their quality and get the NAAC scores required for grant of graded autonomy.

If a university regains its higher status after losing it, the privileges of that higher category (category I or II) "shall be restored" from the day the status is changed.

In such cases, it will be "incumbent" upon the university concerned to intimate the UGC about its changed status "within thirty days" from the date of the getting new accreditation scores and NAAC grading, the UGC's graded autonomy regulations provide.

The accreditation status awarded by NAAC is valid for a period of five to seven years depending on the results of the quality assessment of a higher education institution by the Council.

Any university, whether government-run or private, is eligible to apply for grant of greater autonomy under the scheme, provided they have secured the prescribed minimum accreditation scores from NAAC.

## India-centric ranking framework

Quacquarelli Symonds (QS), a UK-based international higher education rating agency, on Wednesday launched India centric framework to rank Indian universities and colleges, reports DHNS from New Delhi. The I-Gauge, the QS ranking framework for India, was launched by former president Pranab Mukherjee. Addressing the gathering, Mukherjee reiterated his emphasis on the need to improve quality of higher education in India. "I must say that I am a bit disappointed because a large chunk of intellectual brains, to my mind, is not being properly utlised to serve the country and the humanity," he said.

SDUAHER






ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ (ಎಡಚಿತ್ರ). ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಘಟಿಕೋತ್ಸವದಲ್ಲಿ ಡಾ.ಎಚ್.ಸುದರ್ಶನ್ ಬಲ್ಲಾಳ್ ಮಾತನಾಡಿದರು

## ದೇವರಾಜು ಅರಸು ವೈದ್ಯಕೀಯ ಮಹಾವಿದ್ಯಾಲಯದ ಘಟಿಕೋತ್ಸವದಲ್ಲಿ ಸುದರ್ಶನ್ ಬಲ್ಲಾಳ್

# ವೈದ್ಯಕೀಯ ವೃತ್ತಿಯಲ್ಲಿ ಮಾನವೀಯತೆ ಮುಖ್ಯ

ಪ್ರಜಾವಾಣಿ ವಾರ್ತೆ

**ಕೋಲಾರ:** 'ವೈದ್ಯಕೀಯ ವೃತ್ತಿಯಲ್ಲಿ ಹಣ ಸಂಪಾದನೆಗಿಂತ ಮಾನವೀಯತೆ ಮುಖ್ಯ' ಎಂದು ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್ ಅಧ್ಯಕ್ಷ ಡಾ.ಎಚ್.ಸುದರ್ಶನ್ ಬಲ್ಲಾಳ್ ಅಭಿಪ್ರಾಯಪಟ್ಟರು.

ನಗರದಲ್ಲಿ ಬುಧವಾರ ನಡೆದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಎಂಟನೇ ಘಟಿಕೋತ್ಸವದಲ್ಲಿ ಮಾತನಾಡಿ, 'ಹಣಕ್ಕಿಂತ ಜೀವ ದೊಡ್ಡದು. ವೈದ್ಯರು ಈ ಸಂಗತಿ ಅರಿತು ವೃತ್ತಿ ಜೀವನದಲ್ಲಿ ಪ್ರಾಮಾಣಿಕತೆ, ಬದ್ಧತೆ ತೋರಿದಾಗ ಮಾತ್ರ ಸಮಾಜದಲ್ಲಿ ಗೌರವ ಗಳಿಸಲು ಸಾಧ್ಯ' ಎಂದರು.

ದೇಶದಲ್ಲಿ ವೈದ್ಯಕೀಯ ಕ್ಷೇತ್ರವು ಇತ್ತೀಚಿನ ದಿನಗಳಲ್ಲಿ ಹಣ ಮಾಡುವ ದಂಧೆಯಾಗಿದೆ. ವೈದ್ಯರಿಗೆ ಸೇವಾ ಮನೋಭಾವ ಇಲ್ಲವಾಗಿದೆ. ದೇಶದಲ್ಲಿ ವೈದ್ಯಕೀಯ ಪದವಿ ಪಡೆದು ಹಣ ಸಂಪಾದನೆಗಾಗಿ ವಿದೇಶಕ್ಕೆ ಹೋಗುತ್ತಿರುವುದು ವಿಷಾದಕರ ಎಂದು ಕಳವಳ ವ್ಯಕ್ತಪಡಿಸಿದರು.

ರೋಗಿ ಹಾಗೂ ವೈದ್ಯರ ಸಂಬಂಧ ಪ್ರಮುಖವಾದದು. ರೋಗಿಗಳಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ 100ರಷ್ಟು ಗುಣಮುಖರಾಗುತ್ತಾರೆ. ವೈದ್ಯರು ಶಿಕ್ಷಣದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆದಾಗ ವೃತ್ತಿ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ಪದವಿ ಪಡೆದ ಮಾತ್ರಕ್ಕೆ ವೈದ್ಯ ಎನಿಸಿಕೊಳ್ಳಲು ಆಗುವುದಿಲ್ಲ. ಪ್ರಾಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ನೀಡಿದರೆ ಪದವಿಗೆ ಅರ್ಥ ಬರುತ್ತದೆ ಎಂದು ಹೇಳಿದರು.




ಘಟಿಕೋತ್ಸವದಲ್ಲಿ ಎಂಬಿಬಿಎಸ್ ವಿದ್ಯಾರ್ಥಿನಿ ಎನ್.ಮೋನಿಕಾ ಅವರಿಗೆ ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್ ಚಿನ್ನದ ಪದಕ ಪ್ರದಾನ ಮಾಡಿದರು

**ಅತ್ಯುತ್ತಮ ಆಯ್ಕೆ:** 'ಮೂತ್ರಪಿಂಡ ಸಮಸ್ಯೆಗೆ ಕಸಿ ಮಾಡುವುದು ಅತ್ಯುತ್ತಮ ಆಯ್ಕೆ. ಮೂತ್ರಪಿಂಡ ಕಳವು ಹಾಗೂ ಕೆಲ ಗೊಂದಲಗಳಿಂದಾಗಿ ಈ ಹಿಂದೆ ಮೂತ್ರಪಿಂಡ ದಾನ ಮತ್ತು ಕಸಿ ಪ್ರಕ್ರಿಯೆ ವಿವಾದಕ್ಕೆ ಕಾರಣವಾಗಿತ್ತು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಶೇ 95ರಷ್ಟು ಮೂತ್ರಪಿಂಡ ಕಸಿ ಪ್ರಕರಣಗಳು ಯಶಸ್ವಿಯಾಗುತ್ತಿವೆ. ಇತ್ತೀಚೆಗೆ ಕೆಲ ವೈದ್ಯಕೀಯ ಸಂಸ್ಥೆಗಳು ನಡೆಸಿದ ಹೃದಯ ಕಸಿಯೂ ಯಶಸ್ವಿಯಾಗಿದೆ' ಎಂದು ತಿಳಿಸಿದರು.

ದೇಶದಲ್ಲಿ ವೈದ್ಯಕೀಯ ಕ್ಷೇತ್ರವು ಶೇ 80ರಷ್ಟು ಖಾಸಗೀಕರಣಗೊಂಡಿದೆ. ಹೀಗಾಗಿ ಬಡ ರೋಗಿಗಳು ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

### ಮುಖ್ಯಾಂಶಗಳು

- ಹಣಕ್ಕಿಂತ ಜೀವ ದೊಡ್ಡದು
- ವೃತ್ತಿ ಬದ್ಧತೆಯಿಂದ ಗೌರವ
- ರೋಗಿ– ವೈದ್ಯರ ಸಂಬಂಧ ಪ್ರಮುಖ



**ಅಂಗಾಂಗ ಕಸಿಯಲ್ಲಿ ಅಮೆರಿಕ ಹಾಗೂ ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಶೇ 10 ರಷ್ಟು ಮಾತ್ರ ಸಮಸ್ಯೆ ಎದುರಾಗುತ್ತಿದೆ**

**–ಡಾ.ಎಚ್.ಸುದರ್ಶನ್ ಬಲ್ಲಾಳ್,**
ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್ ಅಧ್ಯಕ್ಷ

ವೈದ್ಯಕೀಯ ತಂತ್ರಜ್ಞಾನ ಸಾಕಷ್ಟು ಮುಂದುವರಿದಿದ್ದು, ಸುಧಾರಿತ ಯಂತ್ರೋಪಕರಣ ಬಳಸಿ ಶಸ್ತ್ರಚಿಕಿತ್ಸೆ ಮಾಡುವುದು ಒಳ್ಳೆಯದು ಎಂದು ಸಲಹೆ ನೀಡಿದರು.

ಯಾವುದೇ ವೃತ್ತಿಯಲ್ಲಿ ಸಮಸ್ಯೆಗಳು ಸಾಮಾನ್ಯ. ಆದರೆ ಸಮಸ್ಯೆಗೆ ಎದೆಗುಂದದೆ ಧೈರ್ಯದಿಂದ ಎದುರಿಸುವ ಶಕ್ತಿ ಪ್ರತಿಯೊಬ್ಬರಲ್ಲೂ ಬರಬೇಕು. ಅಂಗಾಂಗ ದಾನ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ಹೇಳಿದರು.

**60 ಸಾವಿರ ವಿದ್ಯಾರ್ಥಿಗಳು:** 'ದೇಶದಲ್ಲಿ 580ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳಿದ್ದು, ಪ್ರತಿ ವರ್ಷ ಸುಮಾರು 60 ಸಾವಿರ ವಿದ್ಯಾರ್ಥಿಗಳು ವಿವಿಧ ವೈದ್ಯಕೀಯ ಕೋರ್ಸ್‌ಗಳಿಗೆ ದಾಖಲಾಗುತ್ತಿದ್ದಾರೆ. ಈ ಪೈಕಿ ಶೇ 30ರಷ್ಟು ಮಂದಿ ಮಾತ್ರ ಸ್ನಾತಕೋತ್ತರ ಪದವೀಧರರಾಗುತ್ತಿದ್ದಾರೆ. ಉಳಿದವರು ಎಂಬಿಬಿಎಸ್ ಪದವಿಗೆ ಮಾತ್ರ ಸೀಮಿತವಾಗುತ್ತಿದ್ದಾರೆ' ಎಂದು ವಿವರಿಸಿದರು.

ಮಹಾವಿದ್ಯಾಲಯದ ಉಪಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕ ವರದಿ ವಾಚಿಸಿದರು. ಎಂಬಿಬಿಎಸ್, ಸ್ನಾತಕೋತ್ತರ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ವಿದ್ಯಾರ್ಥಿಗಳಾದ ಡಾ.ಸಿ.ಸೌಮ್ಯ, ಡಾ.ಪೂಜಾ, ಡಾ.ಕೆ.ಎಂ.ಅಭಿಷೇಕ್, ಡಾ.ಪ್ರಿಯಾಂಕಾ ಮತ್ತು ಡಾ.ಕಾವ್ಯಾ ಚಿನ್ನದ ಪದಕ ಗಳಿಸಿದರು.

ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್, ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ, ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಭಾಗವಹಿಸಿದ್ದರು.

ಸಂಯುಕ್ತ ಕರ್ನಾಟಕ



# ವೈದ್ಯಕೀಯ ಶಿಕ್ಷಣಕ್ಕೆ ಸರ್ಜರಿ ಅಗತ್ಯ ಬಲ್ಲಾಳ್

ಸಂ.ಕ ಸಮಾಚಾರ ಕೋಲಾರ

ದೇಶದಲ್ಲಿ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ಅವಶ್ಯವೆಂದು ಮಣಿಪಾಲ್ ಆರೋಗ್ಯ ಸಂಸ್ಥೆ ಮುಖ್ಯಸ್ಥ ಡಾ. ಸುದರ್ಶನ್ ಬಲ್ಲಾಳ್ ಅಭಿಪ್ರಾಯಪಟ್ಟರು.

ಬುಧವಾರ ದೇವರಾಜ ಅರಸ್ ವೈದಕೀಯ ಶಿಕ್ಷಣ ಸಂಸ್ಥೆ ಘಟಿಕೋತ್ಸವದಲ್ಲಿ ವೈದ್ಯಕೀಯ ಶಿಕ್ಷಣ ರಂಗದ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಅವರು ದೇಶದ ವೈದ್ಯಕೀಯ ಶೈಕ್ಷಣಿಕ ವ್ಯವಸ್ಥೆಗೆ ಸೂಕ್ತ ಸರ್ಜರಿ ಅವಶ್ಯಕತೆ ಇದೆ ಎಂದರು.

ರಾಷ್ಟ್ರದ 580 ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಂದ ಪ್ರತಿ ವರ್ಷ 60 ಸಾವಿರ ವೈದ್ಯರು ಪದವಿ ಪಡೆಯುತ್ತಿದ್ದಾರೆ. 20 ಸಾವಿರ ಪದವೀಧರರು ಸ್ನಾತಕೋತ್ತರ ಪದವಿ ಪ್ರವೇಶಕ್ಕಾಗಿ ಹೋರಾಟ ನಡೆಸುವ ಭರದಲ್ಲಿ ಹಲವಾರು ವರ್ಷ ತಮ್ಮ ಜ್ಞಾನದ ಲಾಭವನ್ನು ಸಮಾಜಕ್ಕೆ ವಿನಿಯೋಗಿಸುವುದರಲ್ಲಿ ವಿಫಲರಾಗಿದ್ದಾರೆ ಎಂದು ವಿಷಾದಿಸಿದರು.




ಈ ವ್ಯವಸ್ಥೆಯನ್ನು ಹೋಗಲಾಡಿಸುವಲ್ಲಿ ಸರ್ಕಾರವು ಅವಶ್ಯ ಕ್ರಮಗಳನ್ನು ಕೈಗೊಳ್ಳಬೇಕು. ಸ್ನಾತಕೋತ್ತರ ಪದವಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದು ತಕ್ಷಣದ ಅಗತ್ಯವಾಗಿದೆ ಎಂದು ಸಲಹೆ ನೀಡಿದರು. ಜಿಲ್ಲೆಗೆ ಒಂದರಂತೆ ಉತ್ತಮ ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಖಾಸಗಿ ಸಹಭಾಗಿತ್ವದೊಂದಿಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು. ಕಳೆದ ವರ್ಷ ಅನುಷ್ಠಾನಗೊಂಡ ನೀಟ್ ವೈದ್ಯಕೀಯ ಪ್ರವೇಶ ಪರೀಕ್ಷೆಯು ಈ ನಿಟ್ಟಿನಲ್ಲಿ ಒಂದು ದಿಟ್ಟ ಹೆಜ್ಜೆ ಎಂದು ಶ್ಲಾಘಿಸಿದ ಬಲ್ಲಾಳ್ ರಾಷ್ಟ್ರೀಯ ಪರೀಕ್ಷಾ ಮಂಡಳಿ ನಡೆಸುವ ಡಿಎನ್‌ಬಿ ಪರೀಕ್ಷೆಯು ಅತ್ಯುತ್ತಮ ಮಟ್ಟದ್ದಾಗಿದ್ದು ಹೆಚ್ಚಿನ ವೈದ್ಯಕೀಯ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಹಾಜರಾಗುವ ಮೂಲಕ ಶಿಕ್ಷಣ ರಂಗದಲ್ಲಿ ಗುಣಮಟ್ಟವನ್ನು ಕಾಪಾಡಬೇಕೆಂದು ಸೂಚಿಸಿದರು. ಭಾರತವು ಅನೇಕ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದ್ದು ಗಗನ ಚುಂಬಿ ಕಟ್ಟಡದ ಪಕ್ಕದಲ್ಲೆ ದೊಡ್ಡ ಕೊಳಗೇರಿ ಕಾಣಬಹುದು. ಹಾಗೆಯೇ ಜಾಗತೀಕ ಸೌಲಭ್ಯಗಳುಳ್ಳ ಆಸ್ಪತ್ರೆಯಿಂದ ನೂರಾರು ಕಿಲೋಮೀಟರ್ ದೂರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿರುತ್ತದೆ. ಇಂತಹ ದ್ವಂದ್ವಗಳ ನಡುವೆ ಅವಶ್ಯಕತೆಯಿರುವ ರೋಗಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುವುದು ಕಷ್ಟಸಾಧ್ಯ ಕೆಲಸ ಎಂದು ನುಡಿದರು.

ಸಮಾಜದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಮಿತಿಮೀರಿದೆ. ಈ ಬಗ್ಗೆ ಸಮಾಜ ಎಚ್ಚೆತ್ತುಕೊಳ್ಳಬೇಕು. ಕಡು ಬಡವರಿಗೂ ಉತ್ತಮ ಜೀವನ ವಿಧಾನವನ್ನು ಒದಗಿಸುವ ಮೂಲಕ ದೇಶದ ಅಭಿವೃದ್ಧಿ ಕಾಣಬೇಕು ಎಂದರು.

ದೇಶದಲ್ಲಿ ಬಡವರು ಪ್ರಾಥಮಿಕ ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ. ಅತಿಸಾರ ಮತ್ತು ಅಪೌಷ್ಠಿಕತೆಯಿಂದ ನವಜಾತ ಶಿಶುಗಳು ಮರಣ ಹೊಂದುತ್ತಿರುವುದು ಇದಕ್ಕೆ ಸಾಕ್ಷಿ. ಹಿಂದಿನ ಕಾಲದಲ್ಲಿ ವೈದ್ಯರ ಮತ್ತು ರೋಗಿಯ ನಡುವೆ ಇದ್ದ ಉತ್ತಮ ಸಂಬಂಧ ಇದೀಗ ಕಣ್ಮರೆಯಾಗಿದೆ. ಹಿಂದೆ ವೈದ್ಯರನ್ನು ದೇವರಿಗೆ ಹೋಲಿಸಿದರೆ ಇದೀಗ ವೈದ್ಯರ ಪರಿಸ್ಥಿತಿ ದೆವ್ವದಂತಾಗಿದೆ ಎಂದು ವಿಷಾದಿಸಿದ ಬಲ್ಲಾಳ್ ರೋಗಿಯ ಮತ್ತು ವೈದ್ಯರ ನಡುವೆ ಸುಮಧುರ ಬಾಂಧವ್ಯ ಪುನರ್‌ಸ್ಥಾಪಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ 249 ಮಂದಿಗೆ ವೈದ್ಯಕೀಯ ಪದವಿಪ್ರಧಾನ ಮಾಡಲಾಯಿತು. ವಿ.ವಿ ಕುಲಪತಿ ಹರೇನ್‌ಕುಮಾರ್, ಉಪಕುಲಪತಿ ಡಾ.ರಘುವೀರ್, ರಿಜಿಸ್ಟ್ರಾರ್ ಕುಟ್ಟಿ, ಕುಲಸಚಿವ ಪ್ರಸಾದ್ ಮತ್ತಿತರರು ಇದ್ದರು.

SDUAHER

## ದೇವರಾಜು ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ 8ನೇ ಘಟಿಕೋತ್ಸವ

# ಪದವಿ ಪಡೆದ ಮಾತ್ರಕ್ಕೆ ವೈದ್ಯರಾಗುವುದಿಲ್ಲ

■ **ವಿಕ ಸುದ್ದಿಲೋಕ** ಕೋಲಾರ

ಪದವಿ ಪಡೆದುಕೊಂಡ ಮಾತ್ರಕ್ಕೆ ವೈದ್ಯಎನಿಸಿಕೊಳ್ಳಲು ಆಗುವುದಿಲ್ಲ, ಪ್ರಾಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ಸಲ್ಲಿಸಿದಾಗ ಅದಕ್ಕೆ ಅರ್ಥ ಬರುತ್ತದೆ ಎಂದು ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್‌ನ ಅಧ್ಯಕ್ಷ ಡಾ.ಎಚ್. ಸುದರ್ಶನ್ ಬಲ್ಲಾಳ್ ತಿಳಿಸಿದರು.

ನಗರದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ 8ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು. ರೋಗಿ ಹಾಗೂ ವೈದ್ಯರ ಸಂಬಂಧ ಪ್ರಮುಖವಾದದು. ವೈದ್ಯರು ವಿದ್ಯಾಭ್ಯಾಸದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆದು ಕೊಂಡಾಗ ವೃತ್ತಿ ಜೀವನದಲ್ಲಿ ಸಾಧನೆ ಮಾಡಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ದೇಶದಷ್ಟೆ ವೈದ್ಯಕೀಯ ಪದವಿ ಪಡೆದು, ಸೇವೆ ಸಲ್ಲಿಸಲು ವಿದೇಶಕ್ಕೆ ಹೋಗುತ್ತಿರುವುದು ವಿಷಾದಕರ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದ ಅವರು, ವೈದ್ಯರು ಹಣಕ್ಕೆ ಆಸೆ ಬೀಳದೆ ರೋಗಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ.100 ಗುಣಮುಖನಾಗುತ್ತಾನೆ ಎಂದರು.

ಕಸಿ ಮಾಡುವುದು ಮೂತ್ರ ಪಿಂಡ ವೈಫಲ್ಯ ಸಮಸ್ಯೆಗೆ ಮೊದಲ ಮತ್ತು ಅತ್ಯುತ್ತಮ ಆಯ್ಕೆ. ಮೂತ್ರಪಿಂಡ ಕಳವು ಹಾಗೂ ಕೆಲವು ಗೊಂದಲದ ಪರಿಣಾಮ ಈ ಹಿಂದೆ ಮೂತ್ರ ಪಿಂಡ ದಾನ, ಕಸಿ ವಿವಾದಕ್ಕೆ ಕಾರಣವಾಗಿತ್ತು. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ, ಶೇ. 95ರಷ್ಟು ಮೂತ್ರ ಪಿಂಡ ಕಸಿ ಪ್ರಕರಣಗಳು ಯಶಸ್ವಿಯಾಗುತ್ತಿವೆ. ಇತ್ತೀಚಿಗೆ ಕೆಲ ಸಂಸ್ಥೆಗಳವರು ನಡೆಸಿದ ಹೃದಯ ಕಸಿಯೂ ಯಶಸ್ವಿಯಾಗಿದೆ. ಈ ಕುರಿತು ಅಂಗಾಗಗಳ ದಾನ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ತಿಳಿಸಿದರು.




ನಗರ ಹೊರವಲಯದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ 8ನೇ ಘಟಿಕೋತ್ಸವದಲ್ಲಿ ಎಂಬಿಬಿಎಸ್ ಸ್ನಾತಕೋತ್ತರ ಪದವೀದರರಿಗೆ ಪದವಿ ಪ್ರಧಾನ ಮಾಡಲಾಯಿತು.

ಅಮೆರಿಕ ಹಾಗೂ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಶೇ.10ರಷ್ಟು ಮಾತ್ರ ಸಮಸ್ಯೆ ಎದುರಾಗುತ್ತಿದೆ. ಕಡಿಮೆ ವೆಚ್ಚದಲ್ಲಿ ಕಿಡ್ನಿ, ಹೃದಯ ಹಾಗೂ ಅಂಗಾಗಗಳ ಕಸಿ ಮಾಡುವುದರಿಂದ ದುಬಾರಿ ವೆಚ್ಚ ಆಗುವುದಿಲ್ಲ ಎಂದು ವಿವರಿಸಿದರು.

ದೇಶದಲ್ಲಿ ವೈದ್ಯಕೀಯ ಕ್ಷೇತ್ರ ಶೇ.80 ಖಾಸಗೀಕರಣಗೊಂಡಿದೆ. ಇದರಿಂದಾಗಿ ಬಡ ರೋಗಿಗಳು ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ತಂತ್ರಾಜ್ಞಾನ ಸಾಕಷ್ಟು ಮುಂದುವರಿದಿದ್ದು, ಆಧುನಿಕ ಪದ್ಧತಿಯ ಯಂತ್ರೋಪಕರಣಗಳ ಬಳಕೆಯಿಂದ ಶಸ್ತ್ರ ಚಿಕಿತ್ಸೆ ಮಾಡಿದರೆ ಶೇ.100 ಸಾಧನೆ ಮಾಡಬಹುದು ಎಂದು ಸಲಹೆ ನೀಡಿದರು.

ಯಾವುದೇ ವೃತ್ತಿ ಜೀವನದಲ್ಲಿ ಸಹಜವಾಗಿ ಸಮಸ್ಯೆಗಳು ಎದುರಾಗುತ್ತವೆ. ಅದನ್ನು ಧೈರ್ಯದಿಂದ ಎದುರಿಸುವಂತ ಶಕ್ತಿ ಪ್ರತಿಯೊಬ್ಬರಲ್ಲೂ ಇರಬೇಕು. ವಿಶ್ವಾಸದಿಂದ ಪ್ರಮಾಣಿಕವಾಗಿ ಸೇವೆ ಸಲ್ಲಿಸಿ ಎಂದು ಹೇಳಿದರು.

ದೇಶದಲ್ಲಿ 580ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 60 ಸಾವಿರಕ್ಕೂ ಹೆಚ್ಚು ಮಂದಿ ಪದವಿ ಪಡೆಯಲು ದಾಖಲಾಗುತ್ತಾರೆ. ಆ ಪೈಕಿ ಕೇವಲ ಶೇ.30 ಮಂದಿ ಸ್ನಾತ್ತಕೊತ್ತರ ಪದವಿ ಪಡೆದು ಕೊಳ್ಳುತ್ತಾರೆ. ಉಳಿದವರು ಕೇವಲ ಎಂಬಿಬಿಎಸ್ ಪದವಿಗೆ ಸಿಮೀತವಾಗುತ್ತಿದ್ದಾರೆ ಎಂದರು.

ಅವಿಭಜಿತ ಕೋಲಾರ ಜಿಲ್ಲೆಯ ಪರಿಸ್ಥಿಯನ್ನು ಅರ್ಥ ಮಾಡಿಕೊಂಡು ಇಲ್ಲಿನ ಜನಕ್ಕೆ ಉತ್ತಮ ಆರೋಗ್ಯ ಸೇವೆ ಜತೆಗೆ, ಶಿಕ್ಷಣ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕ ವರದಿ ವಾಚಿಸಿದರು. ಇದೇ ಸಂದರ್ಭದಲ್ಲಿ ಎಂಬಿಬಿಎಸ್, ಸ್ನಾತ್ತಕೊತ್ತರ ಪದವಿ ಪ್ರದಾನ ಮಾಡಲಾಯಿತು.

ಮಹಾವಿದ್ಯಾಲಯದ ಕುಲಪತಿ ಡಾ. ಎಸ್.ಕುಮಾರ್. ಮಹಾವಿದ್ಯಾಲಯದ ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ, ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್. ಎನ್.ಪ್ರಸಾದ್ ಭಾಗವಹಿಸಿದ್ದರು.

ಕೋಲಾರ ಪ್ರಭ



# ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳುವುದು ಸರಿಯಲ್ಲ

ಕೋಲಾರ: 'ವೈದ್ಯರು ಹಣಕ್ಕೆ ಆಸೆ ಬೀಳದೆ ರೋಗಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ.100ರಷ್ಟು ಗುಣಮುಖನಾಗುತ್ತಾನೆ' ಎಂದು ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್‌ನ ಅಧ್ಯಕ್ಷ ಡಾ.ಎಚ್.ಸುದರ್ಶನ್ ಬಲ್ಲಾಳ್ ಅಭಿಪ್ರಾಯಪಟ್ಟರು.

ನಗರದ ಶ್ರೀ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ 8ನೇ ಘಟಿಕೋತ್ಸವದಲ್ಲಿ ಮಾತನಾಡಿ, ದೇಶದಲ್ಲಿ ವೈದ್ಯಕೀಯ ಪದವಿ ಪಡೆದು, ಸೇವೆ ಸಲ್ಲಿಸಲು ವಿದೇಶಕ್ಕೆ ಹೋಗುತ್ತಿರುವುದು ವಿಷಾದಕರ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

**ಶೇ. 30ರಷ್ಟು ಮಂದಿಗೆ ಉನ್ನತ ಶಿಕ್ಷಣ:** ಪದವಿ ಪಡೆದುಕೊಂಡ ಮಾತ್ರಕ್ಕೆ ವೈದ್ಯ ಎನಿಸಿಕೊಳ್ಳಲು ಆಗುವುದಿಲ್ಲ. ಪ್ರಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ಸಲ್ಲಿಸಿದಾಗ ಅದಕ್ಕೆ ಅರ್ಥ ಬರುತ್ತದೆ. ದೇಶದಲ್ಲಿ 580ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 60 ಸಾವಿರಕ್ಕೂ ಹೆಚ್ಚು ಮಂದಿ ವೈದ್ಯಕೀಯ ಪದವಿ ಪಡೆಯಲು ದಾಖಲಾಗುತ್ತಾರೆ. ಆ ಪೈಕಿ ಕೇವಲ ಶೇ.30ರಷ್ಟು ಮಂದಿ ಮಾತ್ರ ಸ್ನಾತಕೋತ್ತರ ಪದವಿ ಪಡೆದುಕೊಳ್ಳುತ್ತಾರೆ. ಉಳಿದವರು ಕೇವಲ ಎಂಬಿಬಿಎಸ್ ಪದವಿಗೆ ಸಮೀತವಾಗುತ್ತಿದ್ದಾರೆ ಎಂದರು.

ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕ ವರದಿ ವಾಚಿಸಿದರು. ಇದೇ ಸಂದರ್ಭದಲ್ಲಿ ಎಂಬಿಬಿಎಸ್, ಸ್ನಾತಕೊತ್ತರ ಪದವಿದಾರರಿಗೆ ಪದವಿ ಪ್ರದಾನ ಮಾಡಲಾಯಿತು. ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್. ಮಹಾವಿದ್ಯಾಲಯದ ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ, ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್ ಭಾಗವಹಿಸಿದ್ದರು.

ULRC SDUAHER

ಕೋಲಾರಶಕ್ತಿ



# ಪ್ರಾಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ಸಲ್ಲಿಸಿದಾಗ ಮಾತ್ರ ಪದವಿಗೆ ಅರ್ಥ ಬರುತ್ತದೆ: ಡಾ.ಎಚ್.ಸುದರ್ಶನ್




ಕೋಲಾರ,ಮಾ.21- ಪದವಿ ಪಡೆದುಕೊಂಡ ಮಾತ್ರಕ್ಕೆ ವೈದ್ಯ ಎನಿಸಿಕೊಳ್ಳಲು ಆಗುವುದಿಲ್ಲ. ಪ್ರಾಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ಸಲ್ಲಿಸಿದಾಗ ಅದಕ್ಕೆ ಅರ್ಥ ಬರುತ್ತದೆ ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ಡಾ.ಎಚ್. ಸುದರ್ಶನ್ ಬಲ್ಲಾಳ್ ತಿಳಿಸಿದರು.

ನಗರದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ 8ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ರೋಗಿ ಹಾಗೂ ವೈದ್ಯರ ಸಂಬಂಧ ಪ್ರಮುಖವಾದದು. ವೈದ್ಯರು ವಿದ್ಯಾಭ್ಯಾಸದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆದುಕೊಂಡಾಗ ವೃತ್ತಿ ಜೀವನದಲ್ಲಿ ಸಾಧನೆ ಮಾಡಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ದೇಶದಲ್ಲಿ ವೈದ್ಯಕೀಯ ಪದವಿ ಪಡೆದು, ಸೇವೆ ಸಲ್ಲಿಸಲು ವಿದೇಶಕ್ಕೆ ಹೋಗುತ್ತಿರುವುವು ವಿಷಾದಕರ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದ ಅವರು, ವೈದ್ಯರು ಹಣಕ್ಕೆ ಆಸೆ ಬೀಳದೆ ರೋಗಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ.100ರಷ್ಟು ಗುಣಮುಖನಾಗುತ್ತಾನೆ ಎಂದರು.

ಕಸಿ ಮಾಡುವುದು ಮೂತ್ರಪಿಂಡ ವೈಫಲ್ಯ ಸಮಸ್ಯೆಗೆ ಮೊದಲ ಮತ್ತು ಅತ್ಯುತ್ತಮ ಆಯ್ಕೆ ಮೂತ್ರಪಿಂಡ ಕಳವು ಹಾಗೂ ಕೆಲವು ಗೊಂದಲದ ಪರಿಣಾಮ ಈ ಹಿಂದೆ ಮೂತ್ರಪಿಂಡ ದಾನ, ಕಸಿ ವಿವಾದಕ್ಕೆ ಕಾರಣವಾಗಿತ್ತು. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ಶೇ95ರಷ್ಟು ಮೂತ್ರ ಪಿಂಡ ಕಸಿ ಪ್ರಕರಣಗಳು ಯಶಸ್ವಿಯಾಗುತ್ತಿವೆ. ಇತ್ತೀಚಿಗೆ ಕಲ ಸಂಸ್ಥೆಗಳವರು ನಡೆಸಿದ ಹೃದಯ ಕಸಿಯೂ ಯಶಸ್ವಿಯಾಗಿದೆ. ಈ ಕುರಿತು ಅಂಗಾಂಗಳ ದಾನ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಅಮೆರಿಕ ಹಾಗೂ ಇತರೆ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಭಾರತದಲ್ಲಿ ಶೇ.10ರಷ್ಟು ಮಾತ್ರ ಸಮಸ್ಯೆ ಎದುರಾಗುತ್ತಿದೆ. ಕಡಿಮೆ ವೆಚ್ಚದಲ್ಲಿ ಕಿಡ್ನಿ, ಹೃದಯ ಹಾಗೂ ಅಂಗಾಂಗಗಳ ಕಸಿ ಮಾಡುವುದರಿಂದ ದುಬಾರಿ ವೆಚ್ಚ ಆಗುವುದಿಲ್ಲ ಎಂದು ವಿವರಿಸಿದರು.

• ದೇಶದಲ್ಲಿ ವೈದ್ಯಕೀಯ ಕ್ಷೇತ್ರ ಶೇ.80ರಷ್ಟು ಖಾಸಗೀಕರಣಗೊಂಡಿದೆ. ಇದರಿಂದಾಗಿ ಬಡ ರೋಗಿಗಳು ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳ ಮೇಲೆಯೇ ಅವಲಂಭನೆಯಾಗ ಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ತಂತ್ರಜ್ಞಾನ ಸಾಕಷ್ಟು ಮುಂದುವರೆದಿದ್ದು, ಆಧುನಿಕ ಪದ್ಧತಿಯ ಯಂತ್ರೋಪಕರಣಗಳ ಬಳಕೆಯಿಂದ ಶಸ್ತ್ರ ಚಿಕಿತ್ಸೆ ನೀಡಿದರೆ ಶೇ.100ರಷ್ಟು ಸಾಧನೆ ಮಾಡಬಹುದು ಎಂದು ಸಲಹೆ ನೀಡಿದರು.

ಯಾವುದೇ ವೃತ್ತಿ ಜೀವನದಲ್ಲಿ ಸಹಜವಾಗಿ ಸಮಸ್ಯೆಗಳು ಎದುರಾಗುತ್ತವೆ. ಅದನ್ನು ಧೈರ್ಯದಿಂದ ಎದುರಿಸುವಂತ ಶಕ್ತಿ ಪ್ರತಿಯೊಬ್ಬರಲ್ಲೂ ಇರಬೇಕು. ವಿಶ್ವಾಸದಿಂದ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಎಂದರು.

ದೇಶದಲ್ಲಿ 580ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 60 ಸಾವಿರಕ್ಕೂ ಹೆಚ್ಚು ಮಂದಿ ವೈದ್ಯಕೀಯ ಪದವಿ ಪಡೆಯಲು ದಾಖಲಾಗುತ್ತಾರೆ. ಆ ಪೈಕಿ ಕೇವಲ ಶೇ.30ರಷ್ಟು ಮಂದಿ ಮಾತ್ರ ಸ್ನಾತಕೋತ್ತರ ಪದವಿ ಪಡೆದುಕೊಳ್ಳುತ್ತಾರೆ. ಉಳಿದವರು ಕೇವಲ ಎಂಬಿಬಿಎಸ್ ಪದವಿಗೆ ಸಮೀತವಾಗುತ್ತಿದ್ದಾರೆ ಎಂದರು.

ಅವಿಭಜಿತ ಕೋಲಾರ ಜಿಲ್ಲೆಯ ಪರಿಸ್ಥಿಯನ್ನು ಅರ್ಥ ಮಾಡಿಕೊಂಡು ಇಲ್ಲಿನ ಜನಕ್ಕೆ ಉತ್ತಮ ಆರೋಗ್ಯ ಸೇವೆ ಜತೆಗೆ, ಶಿಕ್ಷಣ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕ ವರದಿ ವಾಚಿಸಿದರು. ಇದೇ ಸಂದರ್ಭದಲ್ಲಿ ಎಂಬಿಬಿಎಸ್, ಸ್ನಾತಕೋತ್ತರ ಪದವಿದರರಿಗೆ ಪದವಿ ಪ್ರದಾನ ಮಾಡಲಾಯಿತು.

ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್, ಮಹಾವಿದ್ಯಾಲಯದ ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ, ಕುಲಸಚಿವ ಡಾ.ಎ.ವಿ. ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ. ಎಲ್.ಎನ್.ಪ್ರಸಾದ್ ಭಾಗವಹಿಸಿದ್ದರು.

ಕೋಲಾರಪತ್ರಿಕೆ



## ದೇವರಾಜ ಅರಸು ವೈದ್ಯಕೀಯ ವಿ.ವಿಯಲ್ಲಿ ಎಂಟನೇ ಘಟಿಕೋತ್ಸವ

# ಒಳ್ಳೆಯ ವೈದ್ಯರಾಗಲು ಚಿಕಿತ್ಸಾ ಕೌಶಲ್ಯವಷ್ಟೇ ಸಾಲದು, ರೋಗಿಗಳ ಬಗ್ಗೆ ಮಾನವೀಯತೆಯಿರಲಿ: ಬಲ್ಲಾಳ್







ಕೋಲಾರ ಮಾ ೨೦

ಒಳ್ಳೆಯ, ಉತ್ತಮ ವೈದ್ಯರಾಗಲು ಚಿಕಿತ್ಸಾ ಕೌಶಲ್ಯ ಮಾತ್ರ ಸಾಲದು. ಜೊತೆಗೆ ಮನುಷ್ಯನ ಬಗ್ಗೆ ಅನುಕಂಪ, ಕರುಣೆಯನ್ನು ಹೊಂದಿರಬೇಕು ಎಂದು ಡಾ॥ ಎಚ್. ಸುದರ್ಶನ್ ಬಲ್ಲಾಳ್ ಅವರು ಅಭಿಪ್ರಾಯಿಸಿದರು.

ಟಮಕದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ-ಪರಿಗಣಿತ ವಿಶ್ವವಿದ್ಯಾಲಯದ ಎಂಟನೆಯ ವಾರ್ಷಿಕ ಘಟಿಕೋತ್ಸವ ಭಾಷಣ ಮಾಡಿದ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ನ ಛೇರ್ಮನ್ ಡಾ॥ ಸುದರ್ಶನ್ ಅವರು ನೀವು ನೀವಾಗಿಯೇ ಇರಿ. ಬೇರೆಯವರು ನೀವು ಏನಾಗಬೇಕೆಂದು ಬಯಸುವರೋ ಅದು ಆಗಬೇಕೆಂದಿಲ್ಲ, ಜಾಗತಿಕ ಪ್ರಪಂಚದ ಅಲೆಗಳ ನಡುವೆಯೂ ನಿಮ್ಮತನ ಉಳಿಸಿಕೊಂಡು, ಪ್ರತಿ ನಿತ್ಯ ಶ್ರಮವಹಿಸಿರಿ. ಆಕಾಶದ ನಕ್ಷತ್ರಗಳತ್ತ ನಿಮ್ಮ ದೃಷ್ಟಿಯಿದ್ದರೂ, ನಿಮ್ಮ ಕಾಲುಗಳು ಭೂಮಿಯ ಮೇಲೆ ದೃಢವಾಗಿ ಇಟ್ಟಿರಿ ಎಂದು ನೂತನ ವೈದ್ಯ ಪದವೀಧರರಿಗೆ ಕಿವಿಮಾತು ಹೇಳಿದರು.

ವೈದ್ಯಕೀಯ ವೃತ್ತಿ ಒಮ್ಮೆ ಗೌರವಾನ್ವಿತವಾಗಿದ್ದು, ಇಂದು ರೋಗಿಗಳು, ಪೋಷಕರು, ಪೊಲೀಸರು, ರಾಜಕೀಯಸ್ಥರು ಈ ವೃತ್ತಿಯಲ್ಲಿ ನಂಬಿಕೆ ಕಳೆದುಕೊಂಡಿದ್ದು, ಹಿಂದೆ ದೇವರಾಗಿದ್ದ ವೈದ್ಯ ಇಂದು ಹಲವು ಕಾರಣಗಳಿಂದ ದೆವ್ವವಾಗಿದ್ದಾನೆ ಎಂದರು.

ಇದಕ್ಕೆ ಆರೋಗ್ಯ ಸೇವೆಯಲ್ಲಿ ಬೆಳೆಯುತ್ತಿರುವ ಅಪಾರ ಚಿಕಿತ್ಸಾ ವೆಚ್ಚ, ರೋಗಿಗಳ ತಪ್ಪು ಗ್ರಹಿಕೆ, ವೈದ್ಯರ ನಿರ್ಲಕ್ಷ್ಯ, ಭ್ರಷ್ಟಾಚಾರ, ಅನೈತಿಕ ವ್ಯವಹಾರದ ಜೊತೆಗೆ ನಕಾರಾತ್ಮಕ ಪತ್ರಿಕಾ ಪ್ರಕಟಣೆಗಳು ಕಾರಣವಾಗಿದೆ ಎಂದ ಬಲ್ಲಾಳ್. ಈಗಲೂ ಎಲ್ಲರೂ ಒಂದಾಗಿ ಕಡಿಮೆ ಚಿಕಿತ್ಸಾವೆಚ್ಚ, ಅನೈತಿಕವಾದುದನ್ನು ಬಿಟ್ಟರೆ ರೋಗಿ-ವೈದ್ಯ ಸಂಬಂಧ ಸುಧಾರಿಸಬಹುದೆಂದು ನುಡಿದರಲ್ಲದೆ ನಂಬಿಕೆಯ ವೈದ್ಯಕೀಯ ಸೇವೆ ನಮ್ಮೆಲ್ಲಾ ಸಂಪನ್ಮೂಲ ಕ್ರೋಢೀಕರಿಸಿದರೆ ಸಾಧ್ಯವೆಂದರು.

ಮಗು ಹೊಟ್ಟೆಯಲ್ಲಿರುವಾಗಲೇ ಅದರ ವ್ಯಾಸಂಗದ ಓಟ ಆರಂಭವಾಗುತ್ತಿದೆ ೨.೩ ವರ್ಷದ ಮಕ್ಕಳಿಗೆ ಸಂದರ್ಶನ ನಡೆಸಲಾಗುತ್ತಿದೆ ಎಂದು ವಿಷಾದಿಸಿ, ಶಿಕ್ಷಣದ ವೈಪರೀತ್ಯಗಳನ್ನು, ಅದರಲ್ಲೂ ವೈದ್ಯಕೀಯ ವ್ಯಾಸಂಗದ ಬಗ್ಗೆ ಮಾತನಾಡಿ, ಪ್ರತಿ ಜಿಲ್ಲೆಗೂ ಒಂದು ವೈದ್ಯಕೀಯ ಕಾಲೇಜು ಅಗತ್ಯವಾಗಿದೆ ಎಂದು ಅಗ್ರಹಿಸಿದರು.

ದೇಶದ ಆರೋಗ್ಯ ಸೇವೆ ಆಶಾದಾಯಕವಾಗಿಲ್ಲ, ಕೆಲವು ಕಡೆ ಆಫ್ರಿಕಾದ ಸಹಾರಾದಲ್ಲಿರುವುದಕ್ಕಿಂತ ಹೀನಾಯವಾಗಿದೆ ಎಂದು ಸುದರ್ಶನ್ ಬಲ್ಲಾಳ್ ಹೇಳಿದರು.

ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಕುಲಪತಿ ಡಾ॥ ಎಸ್. ಕುಮಾರ್ ಅವರು ಪದವೀಧರರಿಗೆ ಚಿನ್ನದ ಪದಕ, ಪ್ರಮಾಣ ಪತ್ರಗಳನ್ನು ವಿತರಿಸಿದರು. ಉಪ ಕುಲಪತಿ ಡಾ॥ ಸಿ.ವಿ. ರಘುವೀರ್ ಅವರು ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಪರೀಕ್ಷಾ ನಿಯಂತ್ರಕ ಡಾ॥ ವಿ.ಎಲ್.ಎಸ್. ಪ್ರಸಾದ್ ಅವರು ಪದವೀಧರರ ಹೆಸರುಗಳನ್ನು ವಾಚಿಸಿದರು. ಉಪಾಧ್ಯಕ್ಷ ರಾಜೇಶ್ ಎನ್. ಜಗದಾಳೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಡಾ॥ ಕೆಂಪರಾಜ್, ವೈದ್ಯಕೀಯ ಕಾಲೇಜಿನ ಬೋಧಕ ಸಿಬ್ಬಂದಿ ಮತ್ತು ಹಲವಾರು ಪೋಷಕರು ಭಾಗವಹಿಸಿದ್ದರು.

# ‘ವೈದ್ಯರು ಹಣಕ್ಕೆ ಆಸೆ ಬೀಳದೆ ರೋಗಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿ : ಡಾ.ಎಚ್.ಸುದರ್ಶನ್ ಬಲ್ಲಾಳ್

ಕೋಲಾರ: 'ವೈದ್ಯರು ಹಣಕ್ಕೆ ಆಸೆ ಬೀಳದೆ ರೋಗಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ.100ರಷ್ಟು ಗುಣಮುಖನಾಗುತ್ತಾನೆ' ಎಂದು ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್‌ನ ಅಧ್ಯಕ್ಷ ಡಾ.ಎಚ್.ಸುದರ್ಶನ್ ಬಲ್ಲಾಳ್ ಅಭಿಪ್ರಾಯಪಟ್ಟರು.




ನಗರದ ದೇವರಾಜ ಅರಸು ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಬುಧವಾರ ನಡೆದ 8ನೇ ಘಟಿಕೋತ್ಸವದಲ್ಲಿ ಮಾತನಾಡಿ, 'ದೇಶದಲ್ಲಿ ವೈದ್ಯಕೀಯ ಪದವಿ ಪಡೆದು, ಸೇವೆ ಸಲ್ಲಿಸಲು ವಿದೇಶಕ್ಕೆ ಹೋಗುತ್ತಿರುವುವು ವಿಷಾದಕರ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ರೋಗಿ ಹಾಗೂ ವೈದ್ಯರ ಸಂಬಂಧ ಪ್ರಮುಖವಾದದು. ವೈದ್ಯರು ವಿದ್ಯಾಭ್ಯಾಸದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆದುಕೊಂಡಾಗ ವೃತ್ತಿ ಜೀವನದಲ್ಲಿ ಸಾಧನೆ ಮಾಡಲು ಸಹಕಾರಿಯಾಗುತ್ತದೆ. ಪದವಿ ಪಡೆದುಕೊಂಡ ಮಾತ್ರಕ್ಕೆ ವೈದ್ಯ ಎನಿಸಿಕೊಳ್ಳಲು ಅಗುವುದಿಲ್ಲ. ಪ್ರಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ಸಲ್ಲಿಸಿದಾಗ ಅದಕ್ಕೆ ಅರ್ಥ ಬರುತ್ತದೆ ಎಂದು ಹೇಳಿದರು.

ಕಸಿ ಮಾಡುವುದು ಮೂತ್ರ ಪಿಂಡ ವೈಫಲ್ಯ ಸಮಸ್ಯೆಗೆ ಮೊದಲ ಮತ್ತು ಅತ್ಯುತ್ತಮ ಆಯ್ಕೆ. ಮೂತ್ರಪಿಂಡ ಕಳವು ಹಾಗೂ ಕೆಲವು ಗೊಂದಲದ ಪರಿಣಾಮ ಈ ಹಿಂದೆ ಮೂತ್ರಪಿಂಡ ದಾನ, ಕಸಿ ವಿವಾದಕ್ಕೆ ಕಾರಣವಾಗಿತ್ತು. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ಶೇ95ರಷ್ಟು ಮೂತ್ರ ಪಿಂಡ ಕಸಿ ಪ್ರಕರಣಗಳು ಯಶಸ್ವಿಯಾಗುತ್ತಿವೆ. ಇತ್ತೀಚೆಗೆ ಕೆಲ ಸಂಸ್ಥೆಗಳವರು ನಡೆಸಿದ ಹೃದಯ ಕಸಿಯೂ ಯಶಸ್ವಿಯಾಗಿದೆ. ಈ ಕುರಿತು ಅಂಗಾಗಗಳ ದಾನ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಅಮೆರಿಕ ಹಾಗೂ ಇತರೆ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಭಾರತದಲ್ಲಿ ಶೇ.10ರಷ್ಟು ಮಾತ್ರ ಸಮಸ್ಯೆ ಎದುರಾಗುತ್ತಿದೆ. ಕಡಿಮೆ ವೆಚ್ಚದಲ್ಲಿ ಕಿಡ್ನಿ, ಹೃದಯ ಹಾಗೂ ಅಂಗಾಗಗಳ ಕಸಿ ಮಾಡುವುದರಿಂದ ದುಭಾರಿ ವೆಚ್ಚ ಅಗುವುದಿಲ್ಲ ಎಂದು ವಿವರಿಸಿದರು.

ದೇಶದಲ್ಲಿ ವೈದ್ಯಕೀಯ ಕ್ಷೇತ್ರ ಶೇ.80ರಷ್ಟು ಖಾಸಗಿಕರಣ ಗೊಂಡಿದೆ. ಇದರಿಂದಾಗಿ ಬಡ ರೋಗಿಗಳು ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳ ಮೇಲೆಯೇ ಅವಲಂಭನೆಯಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ತಂತ್ರಾಜ್ಞಾನ ಸಾಕಷ್ಟು ಮುಂದುವರೆದಿದ್ದು, ಆಧುನಿಕ ಪದ್ಧತಿಯ ಯಂತ್ರೋಪಕರಣಗಳ ಬಳಕೆಯಿಂದ ಶಸ್ತ್ರ ಚಿಕಿತ್ಸೆ ನೀಡಿದರೆ ಶೇ.100ರಷ್ಟು ಸಾಧನೆ ಮಾಡಬಹುದು ಎಂದು ಸಲಹೆ ನೀಡಿದರು. ಯಾವುದೇ ವೃತ್ತಿ ಜೀವನದಲ್ಲಿ ಸಹಜವಾಗಿ ಸಮಸ್ಯೆಗಳು ಎದುರಾಗುತ್ತವೆ. ಅದನ್ನು ಧೈರ್ಯದಿಂದ ಎದುರಿಸುವಂತ ಶಕ್ತಿ ಪ್ರತಿಯೊಬ್ಬರಲ್ಲೂ ಇರಬೇಕು. ವಿಶ್ವಾಸದಿಂದ ಪ್ರಮಾಣಿಕವಾಗಿ ಸೇವೆ ಸಲ್ಲಿಸಿ ಎಂದು ಹೇಳಿದರು.

ದೇಶದಲ್ಲಿ 580ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 60 ಸಾವಿರಕ್ಕೂ ಹೆಚ್ಚು ಮಂದಿ ವೈದ್ಯಕೀಯ ಪದವಿ ಪಡೆಯಲು ದಾಖಲಾಗುತ್ತಾರೆ. ಆ ಪೈಕಿ ಕೇವಲ ಶೇ.30ರಷ್ಟು ಮಂದಿ ಮಾತ್ರ ಸ್ನಾತಕೋತ್ತರ ಪದವಿ ಪಡೆದುಕೊಳ್ಳುತ್ತಾರೆ. ಉಳಿದವರು ಕೇವಲ ಎಂಬಿಬಿಎಸ್ ಪದವಿಗೆ ಸಮೀತವಾಗುತ್ತಿದ್ದಾರೆ ಎಂದರು.

ಅವಿಭಜಿತ ಕೋಲಾರ ಜಿಲ್ಲೆಯ ಪರಿಸ್ಥಿಯನ್ನು ಅರ್ಥ ಮಾಡಿಕೊಂಡು ಇಲ್ಲಿನ ಜನಕ್ಕೆ ಉತ್ತಮ ಆರೋಗ್ಯ ಸೇವೆ ಜತೆಗೆ, ಶಿಕ್ಷಣ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕ ವರದಿ ವಾಚಿಸಿದರು. ಇದೇ ಸಂದರ್ಭದಲ್ಲಿ ಎಂಬಿಬಿಎಸ್, ಸ್ನಾತಕೊತ್ತರ ಪದವಿದಾರರಿಗೆ ಪದವಿ ಪ್ರದಾನ ಮಾಡಲಾಯಿತು. ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್. ಮಹಾವಿದ್ಯಾಲಯದ ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ, ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಭಾಗವಹಿಸಿದ್ದರು.

# ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ 8ನೇ ಘಟಿಕೋತ್ಸವ

# ಬಡವರ ಸೇವೆ ಮಾಡಿ ವೃತ್ತಿ ಗೌರವ ಉಳಿಸಿ: ಡಾ.ಎಚ್.ಸುದರ್ಶನ್ ಬಲ್ಲಾಳ್

ಕೋಲಾರ,ಮಾ.21– ಪದವಿ ಪಡೆದುಕೊಂಡ ಮಾತ್ರಕ್ಕೆ ವೈದ್ಯ ಎನಿಸಿಕೊಳ್ಳಲು ಅಗುವುದಿಲ್ಲ. ಪ್ರಾಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ಸಲ್ಲಿಸಿದಾಗ ಅದಕ್ಕೆ ಅರ್ಥ ಬರುತ್ತದೆ ಬೆಂಗಳೂರಿನ ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್‌ನ ಅಧ್ಯಕ್ಷ ಡಾ.ಎಚ್. ಸುದರ್ಶನ್ ಬಲ್ಲಾಳ್ ತಿಳಿಸಿದರು.

ನಗರದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ 8ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ರೋಗಿ ಹಾಗೂ ವೈದ್ಯರ ಸಂಬಂಧ ಪ್ರಮುಖವಾದದು. ವೈದ್ಯರು ವಿದ್ಯಾಭ್ಯಾಸದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆದುಕೊಂಡಾಗ ವೃತ್ತಿ ಜೀವನದಲ್ಲಿ ಸಾಧನೆ ಮಾಡಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ದೇಶದಲ್ಲಿ ವೈದ್ಯಕೀಯ ಪದವಿ ಪಡೆದು, ಸೇವೆ ಸಲ್ಲಿಸಲು ವಿದೇಶಕ್ಕೆ ಹೋಗುತ್ತಿರುವುದು ವಿಷಾಧಕರ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದ ಅವರು, ವೈದ್ಯರು ಹಣಕ್ಕೆ ಆಸೆ ಬೀಳದೆ ರೋಗಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ.100ರಷ್ಟು ಗುಣಮುಖನಾಗುತ್ತಾನೆ ಎಂದರು.

ಕಸಿ ಮಾಡುವುದು ಮೂತ್ರ ಪಿಂಡ ವೈಫಲ್ಯ ಸಮಸ್ಯೆಗೆ ಮೊದಲ ಮತ್ತು ಅತ್ಯುತ್ತಮ ಆಯ್ಕೆ. ಮೂತ್ರಪಿಂಡ ಕಳವು ಹಾಗೂ ಕೆಲವು ಗೊಂದಲದ ಪರಿಣಾಮ ಈ ಹಿಂದೆ ಮೂತ್ರಪಿಂಡ ದಾನ, ಕಸಿ ವಿವಾದಕ್ಕೆ ಕಾರಣವಾಗಿತ್ತು. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ಶೇ95ರಷ್ಟು ಮೂತ್ರ ಪಿಂಡ ಕಸಿ




ಪ್ರಕರಣಗಳು ಯಶಸ್ವಿಯಾಗುತ್ತಿವೆ. ಇತ್ತೀಚೆಗೆ ಕೆಲ ಸಂಸ್ಥೆಗಳವರು ನಡೆಸಿದ ಹೃದಯ ಕಸಿಯೂ ಯಶಸ್ವಿಯಾಗಿದೆ. ಈ ಕುರಿತು ಅಂಗಾಂಗಗಳ ದಾನ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಅಮೇರಿಕ ಹಾಗೂ ಇತರೆ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಭಾರತದಲ್ಲಿ ಶೇ.10ರಷ್ಟು ಮಾತ್ರ ಸಮಸ್ಯೆ ಎದುರಾಗುತ್ತಿದೆ. ಕಡಿಮೆ ವೆಚ್ಚದಲ್ಲಿ ಕಿಡ್ನಿ, ಹೃದಯ ಹಾಗೂ ಅಂಗಾಗಗಳ ಕಸಿ ಮಾಡುವುದರಿಂದ ದುಬಾರಿ ವೆಚ್ಚ ಅಗುವುದಿಲ್ಲ ಎಂದು ವಿವರಿಸಿದರು.

ದೇಶದಲ್ಲಿ ವೈದ್ಯಕೀಯ ಕ್ಷೇತ್ರ ಶೇ.80ರಷ್ಟು ಖಾಸಗಿಕರಣಗೊಂಡಿದೆ. ಇದರಿಂದಾಗಿ ಬಡ ರೋಗಿಗಳು ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳ ಮೇಲೆಯೇ ಅವಲಂಭನೆಯಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ತಂತ್ರಜ್ಞಾನ ಸಾಕಷ್ಟು ಮುಂದುವರೆದಿದ್ದು, ಆಧುನಿಕ ಪದ್ದತಿಯ ಯಂತ್ರೋಪಕರಣಗಳ ಬಳಕೆಯಿಂದ ಶಸ್ತ್ರ ಚಿಕಿತ್ಸೆ ನೀಡಿದರೆ ಶೇ.100ರಷ್ಟು ಸಾಧನೆ ಮಾಡಬಹುದು ಎಂದು ಸಲಹೆ ನೀಡಿದರು.

ಯಾವುದೇ ವೃತ್ತಿ ಜೀವನದಲ್ಲಿ ಸಹಜವಾಗಿ ಸಮಸ್ಯೆಗಳು ಎದುರಾಗುತ್ತವೆ. ಅದನ್ನು ಧೈರ್ಯದಿಂದ ಎದುರಿಸುವಂತ ಶಕ್ತಿ ಪ್ರತಿಯೊಬ್ಬರಲ್ಲೂ ಇರಬೇಕು. ವಿಶ್ವಾಸದಿಂದ ಪ್ರಮಾಣಿಕವಾಗಿ ಸೇವೆ ಸಲ್ಲಿಸಿ ಎಂದು ಹೇಳಿದರು.

ದೇಶದಲ್ಲಿ 580ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 60 ಸಾವಿರಕ್ಕೂ ಹೆಚ್ಚು ಮಂದಿ ವೈದ್ಯಕೀಯ ಪದವಿ ಪಡೆಯಲು ದಾಖಲಾಗುತ್ತಾರೆ. ಆ ಪೈಕಿ ಕೇವಲ ಶೇ.30ರಷ್ಟು ಮಂದಿ ಮಾತ್ರ ಸ್ನಾತಕೋತ್ತರ ಪದವಿ ಪಡೆದುಕೊಳ್ಳುತ್ತಾರೆ. ಉಳಿದವರು ಕೇವಲ ಎಂಬಿಬಿಎಸ್ ಪದವಿಗೆ ಸಮೀತವಾಗುತ್ತಿದ್ದಾರೆ ಎಂದರು.

ಅವಿಭಜಿತ ಕೋಲಾರ ಜಿಲ್ಲೆಯ ಪರಿಸ್ಥಿಯನ್ನು ಅರ್ಥ ಮಾಡಿಕೊಂಡು ಇಲ್ಲಿನ ಜನಕ್ಕೆ ಉತ್ತಮ ಆರೋಗ್ಯ ಸೇವೆ ಜತೆಗೆ, ಶಿಕ್ಷಣ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಉಪ ಕುಲಪತಿ ಡಾ.ಸಿ.ವಿ.ರಘುವೀರ್ ವಾರ್ಷಿಕ ವರದಿ ವಾಚಿಸಿದರು. ಇದೇ ಸಂದರ್ಭದಲ್ಲಿ ಎಂಬಿಬಿಎಸ್, ಸ್ನಾತಕೊತ್ತರ ಪದವಿದರರಿಗೆ ಪದವಿ ಪ್ರದಾನ ಮಾಡಲಾಯಿತು.

ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್. ಮಹಾವಿದ್ಯಾಲಯದ ಉಪಾಧ್ಯಕ್ಷ ಡಾ.ರಾಜೇಶ್ ಎನ್.ಜಗದಾಳೆ, ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್. ಪ್ರಸಾದ್ ಭಾಗವಹಿಸಿದ್ದರು.